ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 15/10/20


# ಸ್ಟಾರ್ಸ್ ಕಲಿಕೆಗೆ ಸಂಪುಟ ಅಸ್ತು

## ಎನ್ಇಪಿ ಅಡಿ ಹೊಸ ಪ್ರಯೋಗ

**ಹೊಸದಿಲ್ಲಿ:** ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ)ಅಡಿಯಲ್ಲಿ ನೂತನ ಕಲಿಕಾ ಪದ್ಧತಿ 'ಸ್ಟಾರ್ಸ್' (ಸ್ಟ್ರೆಂಥನಿಂಗ್ ಟೀಚಿಂಗ್ -ಲರ್ನಿಂಗ್ ಆ್ಯಂಡ್ ರಿಸಲ್ಟ್ಸ್ ಫಾರ್ ಸ್ಟೇಟ್ಸ್) ಯೋಜನೆ ಜಾರಿಗೆ ಬುಧವಾರ ನಡೆದ ಪ್ರಧಾನಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಶಾಲಾ ಶಿಕ್ಷಣ ವ್ಯವಸ್ಥೆಯ ಸ್ಟಬಲೀಕರಣಕ್ಕೆ ಸ್ಟಾರ್ಸ್ ಒತ್ತು ನೀಡಲಿದ್ದು, ಕೇಂದ್ರ ಸರಕಾರದಿಂದ ರಾಜ್ಯ ಸರಕಾರಗಳಿಗೆ ಈ ಸಂಬಂಧ ಅನುದಾನ ಹರಿದು ಬರಲಿದೆ. ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್, '' ವಿಶ್ವಬ್ಯಾಂಕ್ ನೆರವು ನೀಡುತ್ತಿರುವ ಸ್ಟಾರ್ಸ್‌ಗೆ 5,718 ಕೋಟಿ ರೂ. ವೆಚ್ಚವಾಗುವ ಅಂದಾಜಿದೆ. ರಾಜ್ಯಗಳಲ್ಲಿನ ಶಿಕ್ಷಣ ವ್ಯವಸ್ಥೆ ಅಭಿವೃದ್ಧಿ, ಮೌಲ್ಯಮಾಪನ, ಇತರ ಪ್ರಭಾವಿಗಳ ಹಸ್ತಕ್ಷೇಪ ನಿಯಂತ್ರಣಕ್ಕೆ ಯೋಜನೆ ಕೇಂದ್ರೀಕರಿಸಲಿದೆ. ಮುಖ್ಯವಾಗಿ ಶಿಕ್ಷಣ ವ್ಯವಸ್ಥೆ ಕೇವಲ ಕಲಿಕೆಯ ಮಾದರಿಯಾಗದೆಯೇ ಅರ್ಥೈಸಿಕೊಳ್ಳುವಿಕೆ ಮಾದರಿಯಾಗುವಂತೆ ಸ್ಟಾರ್ಸ್ ಮೂಲಕ ಗಮನ ಹರಿಸಲಾಗುವುದು. ಇದೆಲ್ಲದರ ನಿಗಾ ಇರಿಸಲು ಶಾಲಾ ಶಿಕ್ಷಣ ಇಲಾಖೆ ಅಡಿಯಲ್ಲಿ 'ಪರಾಖ್ ' ಎಂಬ ಸ್ವಾಯತ್ತ ಸಂಸ್ಥೆಯೊಂದನ್ನು ಕೂಡ ರಚಿಸಲಾಗುವುದು, '' ಎಂದರು.

**ಆರು ರಾಜ್ಯಗಳಲ್ಲಿ ಮೊದಲು ಜಾರಿ:** ಹಿಮಾಚಲ ಪ್ರದೇಶ, ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ಕೇರಳ ಮತ್ತು ಒಡಿಶಾದಲ್ಲಿ ಮೊದಲ ಹಂತವಾಗಿ ಸ್ಟಾರ್ಸ್ ಜಾರಿಗೆ ಬರಲಿದೆ. ಇದಲ್ಲದೆ ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕ್‌ನ ಸಹಯೋಗದಲ್ಲಿ ಕೂಡ ಇದೇ ಮಾದರಿಯ ಶಾಲಾ ಕಲಿಕೆ ಸಬಲೀಕರಣ ಯೋಜನೆಯನ್ನು ಗುಜರಾತ್, ತಮಿಳುನಾಡು, ಉತ್ತರಾಖಂಡ, ಜಾರ್ಖಂಡ್ ಮತ್ತು ಅಸ್ಸಾಂನಲ್ಲಿ ಜಾರಿ ಮಾಡಲಾಗುವುದು. ಇದರೊಟ್ಟಿಗೆ ನೈಸರ್ಗಿಕ ಮತ್ತು ಮನುಷ್ಯ ನಿರ್ಮಿತ ಆರೋಗ್ಯ ವಿಪತ್ತುಗಳ ನಿರ್ವಹಣೆಗಾಗಿ (ಶಿಕ್ಷಣ ಹಕ್ಕುಗಳನ್ನು ವಿದ್ಯಾರ್ಥಿಗಳು ಕಳೆದುಕೊಳ್ಳದಂತೆ ಮುನ್ನೆಚ್ಚರಿಕೆ) ತುರ್ತು ಪ್ರತಿಕ್ರಿಯೆ ವ್ಯವಸ್ಥೆಯೊಂದನ್ನು ರಚಿಸಿ ರಾಷ್ಟ್ರ ಮಟ್ಟದಲ್ಲಿ ಶಾಲೆಗಳು ಮತ್ತು ವಿದ್ಯಾರ್ಥಿಗಳ ಸ್ಥಿತಿಗತಿಗಳ ಕುರಿತು ಮಾಹಿತಿ ಸಂಗ್ರಹಿಸಲಾಗುವುದು ಎಂದು ಜಾವಡೇಕರ್ ತಿಳಿಸಿದ್ದಾರೆ.



ವಿಶ್ವಬ್ಯಾಂಕ್ ನೆರವಿನೊಂದಿಗೆ 5,718 ಕೋಟಿ ರೂ. ವೆಚ್ಚ

**ಜಮ್ಮು-ಕಾಶ್ಮೀರಕ್ಕೆ ರೂ.520 ಕೋಟಿ:** ದೀನ್ ದಯಾಳ್ ಅಂತ್ಯೋದಯ ಯೋಜನೆ- ರಾಷ್ಟ್ರೀಯ ಗ್ರಾಮೀಣ ಜೀವನಾಧಾರ ಕಾರ್ಯಕ್ರಮ (ಡಿಎವೈ- ಎನ್ಆರ್ಎಲ್ಎಂ) ಅಡಿಯಲ್ಲಿ ನೂತನ ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು-ಕಾಶ್ಮೀರ ಮತ್ತು ಲಡಾಕ್‌ಗೆ 520 ಕೋಟಿ ರೂ. ವಿಶೇಷ ಪ್ಯಾಕೇಜ್ ನೀಡಲು ಸಂಪುಟ ಸಮ್ಮತಿ ದೊರೆತಿದೆ. ಐದು ವರ್ಷಗಳವರೆಗೆ ವಿವಿಧ ಯೋಜನೆಗಳನ್ನು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪ್ಯಾಕೇಜ್ ಮೂಲಕ ಜಾರಿಗೊಳಿಸಲಾಗುವುದು. ಗ್ರಾಮೀಣ ಮನೆಗಳ ಸ್ಥಿತಿಗತಿ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣಕ್ಕೆ (10.58 ಲಕ್ಷ ಮಹಿಳೆಯರಿಗೆ ನೆರವು) ಒತ್ತು ನೀಡಲಾಗುವುದು ಎಂದು ಸಚಿವ ಜಾವಡೇಕರ್ ಹೇಳಿದ್ದಾರೆ.